**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಕ್ರಿಮಿನಲ್ ಮಿಸ್. ನಂಃ891/2022 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **13.02.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಎದುರುದಾರರ ಪರ ಶ್ರೀ**.ಎಂ.ಎಸ್** ವಕೀಲರಿಂದಃ

ನನ್ನ ಹಾಗೂ ಎದುರುದಾರರು ಸಂಬಂಧ ಹೊಸ ಸಂಬಂಧವಾಗಿರುತ್ತದೆ. ಎದುರುದಾರರ ಸ್ನೇಹಿತ ಶಿಕ್ಷಕರಾದ ಮಹೇಶರವರು ಹಾಗೂ ನನ್ನ ಚಿಕ್ಕಪ್ಪ ಸಿದ್ದೇಗೌಡರವರು ಸ್ನೇಹಿತರಾಗಿರುವ ಕಾರಣ ಅವರ ಮುಖಾಂತರ ನನ್ನ ಮತ್ತು 1 ನೇ ಎದುರುದಾರರ ಮದುವೆಯಾಗಿರುತ್ತದೆ. ನಾನು ಎದುರುದಾರರ ಪೂರ್ವಾಪರವನ್ನು ವಿಚಾರಿಸಿ ನಂತರ ಅವರನ್ನು ಮದುವೆಯಾಗಿರುತ್ತೇನೆ ಎಂದರೆ ಸರಿ. ಕೋವಿಡ ಸಮಯವಾದ ಕಾರಣ ನನ್ನ ಚಿಕ್ಕಪ್ಪ ಹುಡುಗ ಹಾಗೂ ಆತನ ಕುಟುಂಬದವರು ಒಳ್ಳೆಯವರು ಎಂದು ತಿಳಿಸಿದ್ದ ಕಾರಣ ನಾನು ಆತನನ್ನು ಮದುವೆಯಾಗಿರುತ್ತೇನೆ ಎಂದು ತಿಳಿಸಿರುತ್ತಾರೆ.

ನನ್ನ ತಂದೆಗೆ ಒಟ್ಟು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಂದೆ ವ್ಯವಸಾಯ ಮಾಡುತ್ತಾರೆ. ನನ್ನ ತಂದೆಗೆ 1 ಎಕರೆ ಜಮೀನು ಇರುತ್ತದೆ. ನನ್ನ ತಂದೆ ಸದರಿ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದು, ಈಗ ಪ್ರಸ್ತುತ ಜಮೀನನ್ನು ಬೋಗ್ಯಕ್ಕೆ ನೀಡಿರುತ್ತಾರೆ. ನನ್ನ ತಂದೆ ಜಮೀನಿನಿಂದ ಬಂದ ಆದಾಯವನ್ನು ತಮ್ಮ ಬ್ಯಾಂಕಿನ ಖಾತೆಯಲ್ಲಿ ಇಡುತ್ತಿದ್ದರು. ನನ್ನ ತಂದೆ ಖರ್ಚುಗಳನ್ನು ಕಳೆದು ಎಷ್ಟು ಉಳಿತಾಯ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮದುವೆಯ ಸಮಯದಲ್ಲಿ ರೂ.12 ಲಕ್ಷ ನಿಖರವಾಗಿ ಖರ್ಚು ಆಗಿರುವುದಿಲ್ಲ ಮತ್ತು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮದುವೆಗೆ ರೂ.12 ಲಕ್ಷ ಹಣವನ್ನು ಖರ್ಚು ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆ ರೂ.12 ಲಕ್ಷ ಹಣವನ್ನು ಖರ್ಚು ಮಾಡಿರುವುದಿಲ್ಲ, ಆದ್ದರಿಂದ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರಿಗೆ 40 ಗ್ರಾಂ ತೂಕದ ಬ್ರೆಸಲೇಟ್ ಮತ್ತು ಕೊರಳಿನ ಚೈನನನ್ನು ನೀಡಿರುವ ಬಾಬ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದೇ ರೀತಿ ಎದುರುದಾರರಿಗೆ 1 ಚಿನ್ನದ ಬಿಸ್ಕೆಟ್ ನೀಡಿರುವ ಬಾಬ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿಯಲ್ಲಿ ತಿಳಿಸಿದ ಪ್ರಮಾಣದಷ್ಟು ಬಂಗಾರವನ್ನು ಎದುರುದಾರರಿಗೆ ನೀಡಿರುವುದಿಲ್ಲ ಮತ್ತು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಅಷ್ಟು ಗ್ರಾಮದ ಬಂಗಾರ ನೀಡಿದ್ದೇ ಆದರೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರಿಗೆ 1 ಕೆಜಿ ತೂಕದ ಬೆಳ್ಳಿ ಆಭರಣಗಳು ನೀಡಿರುವುದಿಲ್ಲ ಮತ್ತು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆ ಕೋವಿಡ ಸಮಯದಲ್ಲಿ ಆಗಿರುವ ಕಾರಣ ಸದರಿ ಮದುವೆ ಸರಳತೆಯಿಂದ ನಡೆದಿರುತ್ತದೆ ಎಂದರೆದಿ ಸರಿಯಲ್ಲ. ಕೋವಿಡ ಸಮಯದಲ್ಲಿ ಸರ್ಕಾರದವರು ಮದುವೆಗೆ ಸಂಬಂಧಿಸಿದಂತೆ ಗಂಡಿನ ಹಾಗೂ ಹೆಣ್ಣಿನ ಕಡೆ ತಲಾ 50 ಜನ ಮೀರದಂತೆ ಸೇರಬೇಕೆಂದು ಸುತ್ತೋಲೆ ಹೊರಡಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು, ನಾವು ಪೊಲೀಸರಿಂದ ಪರವಾನಿಗೆಯನ್ನುಪಡೆದುಕೊಂಡು ಮದುವೆ ಕಾರ್ಯ ನಡೆಸಿದ್ದು, ಒಟ್ಟಾಗಿ 1000 ಜನ ಬಂದಿದ್ದರು ಎಂದು ನುಡಿಯುತ್ತಾರೆ. ಸರ್ಕಾರದ ಸುತ್ತೋಲೆಯನ್ನು ಮೀರಿ ಪೊಲೀಸರು ಯಾವುದೇ ಪರವಾನಿಗೆ ನೀಡದಿದ್ದರೂ ಸಹ 1000 ಜನ ಸೇರಿ ಮದುವೆ ನೇರೆವೆರೆಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯ ಸಂಪ್ರದಾಯದಂತೆ ಬೀಗರ ಔತನಕೂಟವನ್ನು ನೇರೆವೆರಸಿರುತ್ತಾರೆ ಎಂದರೆ ಸಾಕ್ಷಿಯು 100 ಜನಕ್ಕೆ ಮಾತ್ರ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು 200 ಜನರಿಗೆ ಬೀಗರ ಔತನ ಕೂಟಕ್ಕೆ ವ್ಯವಸ್ಥೆ ಮಾಡಿದ್ದರು ಎಂದರೆ ಸರಿಯಲ್ಲ. ಎದುರುದಾರರು ಸಂಪ್ರದಾಯದಂತೆ ಬಂಗಾರದ ಓಲೆ, ಬಂಗಾರದ ಸರ, ಬಂಗಾರದ ತಾಳಿ ಹಾಗೂ ಸೀರೆಯನ್ನು ನನಗೆ ನೀಡಿರುತ್ತಾರೆ ಎಂದರೆ ಸರಿ. ಮದುವೆಯಾದ ನಂತರ 15 ದಿನಗಳ ಕಾಲ ಪಾಲಹಳ್ಳಿ ಗ್ರಾಮದಲ್ಲಿ ವಾಸ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಮದುವೆ ಆಗಸ್ಟ್ ತಿಂಗಳಲ್ಲಿ ನೇರೆವೆರಿದ್ದು, ನಾನು ಆಕ್ಟೋಬರ್ 3 ರವರಗೆ ಪಾಲಹಳ್ಳಿ ಗ್ರಾಮದಲ್ಲಿ ವಾಸ ಮಾಡಿದ್ದು, ನಂತರ ಬೆಂಗಳೂರಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟಿ ಸವಾಲುಃ** ಎದುರುದಾರರ ಪರ ಶ್ರೀ.**ಎಂ.ಎಸ್** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**